# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಸತ್ಯಂವದ ಧರ್ಮಂಚರ

ಕವಿ

## ಪ್ರಾಚಾರ್ಯ ಮಾರ್ವಿ ನಾರ್ಣಪ್ಪ ಉಪ್ಪೂರ

ಅಂತರಜಾಲ ಆವೃತ್ತಿ ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.com

ಆವೃತ್ತಿ ೧.೦ ನವೆಂಬರ್ ೩೦, ೨೦೧೯

ಯಕ್ಷವಾಹಿನಿ

Email: yakshaprasangakosha@gmail.com, yakshavahini@gmail.com Blog: www.yakshaprasangakosha.com

## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ್ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ್ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾ ಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ, ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರು ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ, ಶ್ರೀಕಾಂತ್ ನಾಯಕ್, ರಘುರಾಜ್ ಶರ್ಮಾ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಮ್. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ವಾಸುದೇವ ಸಾಮಗ, ಎಂ.ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣುಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ, ಉಡುಪಿ, ಯಕ್ಷಸಿಂಚನ, ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್ , ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್ ಎಮ್ ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ.ಎಸ್, ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎಸ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ರಾಘವೇಂದ್ರ ಮಯ್ಯ (ಲೆಕ್ಕಪತ್ರ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ  ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ  ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ದರ್ಶನವಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಕಾಲ್ಪನಿಕ

**ಆಧಾರ ಗ್ರಂಥ:**

ಬೃಹತ್ಕಥಾಮಂಜರಿ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಪದವೀಧರ ಯಕ್ಷಗಾನ ಸಂಘ, ಮುಂಬೈ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೧೬೩

**ಪಾತ್ರಗಳು:**

ದೇವೇಂದ್ರ, ಅಗ್ನಿ, ವರುಣ, ಬ್ರಹ್ಮ, ಧರ್ಮಪ್ರಭು, ರತ್ನಾಂಗ, ವಿನೋದ, ಕೌಮುದಿ, ಸುಹಾಸಿನಿ, ಸತ್ಯವಂತ, ಭೂತ, ಸುಘೋಷಿ, ವ್ಯಾಘ್ರನಖಿ, ಜಯಂತ, ಭಾರದ್ವಾಜ ಮುನಿ, ಕೇತಾರ, ತಾಮ್ರಪರ್ಣಿ, ಗುಣಮಣಿ

**ಕಥಾಸಾರಾಂಶ:**

ದೇವೇಂದ್ರನ ಓಲಗ, ಬ್ರಹ್ಮನಲ್ಲಿಗೆ ಪಯಣ, ಧರ್ಮಪ್ರಭುವಿಗೆ ಪುತ್ರ ಸಂತಾನ, ದುಷ್ಟ ರತ್ನಾಂಗನಿಂದ ಅರಮನೆಯ ಸಖಿ ಕೌಮುದಿಯ ಮಾನಭಂಗ, ಅರಸನಿಂದ ಶಿಕ್ಷೆ, ರತ್ನಾಂಗನ ದೇಶಭ್ರಷ್ಟತೆ, ಸುಹಾಸಿನಿಯ ಸಾಂಗತ್ಯ, ರತ್ನಾಂಗನ ಪಲಾಯನ, ಬ್ರಹ್ಮನಿಂದ ಶಾಪಗ್ರಸ್ತ ಸುಘೋಷಿಯಿಂದ ರಕ್ಷಣೆ, ಸುಹಾಸಿನಿಯ ಮಗ ಜಯಂತನಿಂದ ಸುಘೋಷಿಯ ಶಾಪವಿಮೋಚನ, ತಂದೆ ಮಗನ ಕದನ, ರತ್ನಾಂಗನ ನಿಧನ, ಜಯಂತನ ಸಾಹಸದಿಂದ ಸಂಜೀವನ ಗಿಡದ ಸಂಪಾದನ. ತಂದೆಗೆ ಪುನರ್ಜನ್ಮದಾನ. ಧರ್ಮಪುರಕ್ಕೆ ಬಂದು ಸಿಂಹಾಸನಾರೋಹಣ.

**ಕವಿ ಪರಿಚಯ :**

ನಾರ್ಣಪ್ಪ ಉಪ್ಪೂರರು ಕುಂದಾಪುರ ತಾಲೂಕಿನ ಹಾಲಾಡಿ ಎಂಬಲ್ಲಿ ೧೯೧೮ರಲ್ಲಿ ಜನಿಸಿದರು. ಆ ಕಾಲದ ಶ್ರೇಷ್ಠ ಭಾಗವತರೆನಿಸಿಕೊಂಡಿದ್ದ ಶ್ರೀನಿವಾಸ ಉಪ್ಪೂರ ಮತ್ತು ಅಕ್ಕಣಿಯಮ್ಮ ದಂಪತಿಗಳ ಪುತ್ರನಾಗಿ ಜನಿಸಿದ ನಾರಣಪ್ಪ ಅವರು ಮನೆಯಲ್ಲೇ ಯಕ್ಷಗಾನದ ವಾತಾವರಣದಲ್ಲಿ ಶ್ರೇಷ್ಠ ಕಲಾವಿದರಾಗಿ ಮೂಡಿ ಬಂದವರು. ಮನೆಯಲ್ಲೇ ಯಕ್ಷಗಾನದ ಪ್ರಮುಖ ಅಂಗಗಳಾದ ಭಾಗವತಿಕೆ, ಮದ್ದಳೆ, ನಾಟ್ಯ ಗಳನ್ನು ಅಭ್ಯಸಿಸಿದ ನಾರಣಪ್ಪರು ೧೯ ನೇ ವಯಸ್ಸಿಗೆ ವೃತ್ತಿ ಜೀವನಕ್ಕೆ ಕಾಲಿರಿಸಿದರು. ಅಂದಿನ ಪ್ರಸಿದ್ಧ ಮೇಳವಾಗಿದ್ದ ಸೌಕೂರು ಮೇಳದ ಮೂಲಕ ಕಲಾ ಜೀವನ ಆರಂಭಿಸಿದ ಅವರು ಸುದೀರ್ಘ ಹಲವಾರು ದಿಗ್ಗಜ ಕಲಾವಿದರೊಂದಿಗೆ ಒಡನಾಟ ಹೊಂದಿದ್ದರು. ಕೋಟ ಅಮೃತೇಶ್ವರಿ ಮೇಳ, ಸಾಲಿಗ್ರಾಮ ಮೇಳ, ಕೊಲ್ಲೂರು, ಪೆರ್ಡೂರು ಮೇಳಗಳಲ್ಲಿ ೪೭ ವರ್ಷಗಳ ಕಾಲ ಸುದೀರ್ಘ ಭಾಗವತಿಕೆಯ ಸೇವೆ ಸಲ್ಲಿಸಿದ ಉಪ್ಪೂರರು ಅಪಾರ ಅಭಿಮಾನಿಗಳನ್ನು ಆ ಕಾಲಕ್ಕೆ ಸಂಪಾದಿಸಿದ್ದರು. ೧೯೭೨ ರಲ್ಲಿ ಆರಂಭವಾದ ಕೋಟ ಯಕ್ಷಗಾನ ಕೇಂದ್ರದ ಗುರುಗಳಾಗಿ ನೇಮಕಗೊಂಡ ಉಪ್ಪೂರರು ಹಲವಾರು ಆಸಕ್ತರಿಗೆ ತನ್ನಲ್ಲಿದ್ದ ವಿದ್ಯೆಯನ್ನು ಧಾರೆಯೆರೆದರು. ಹಂಗಾರಕಟ್ಟೆ ಕಲಾ ಕೇಂದ್ರದ ಪ್ರಾಚಾರ್ಯರಾಗಿದ್ದು ಅನೇಕ ಉತ್ತಮ ಮಟ್ಟದ ಶಿಷ್ಯಭಾಗವತರನ್ನು ಯಕ್ಷಗಾನರಂಗಕ್ಕೆ ನೀಡಿದ್ದಾರೆ. ಕಂಚಿನ ಕಂಠದ ಕಾಳಿಂಗ ನಾವುಡರು, ರಂಗ ಮಾಂತ್ರಿಕ ಸುಬ್ರಹ್ಮಣ್ಯ ಧಾರೇಶ್ವರ, ಕೆ. ಪಿ. ಹೆಗಡೆ, ಹಾಲಾಡಿ ರಾಘವೇಂದ್ರ ಮಯ್ಯ ಸೇರಿದಂತೆ ಹಲವು ಖ್ಯಾತ ನಾಮರು ಉಪ್ಪೂರರ ಶಿಷ್ಯರು. ತೆಕ್ಕಟ್ಟೆ ಬಾಬಣ್ಣ ಶ್ಯಾನುಭಾಗ್, ಕೊಕ್ಕರ್ಣೆ ನರಸಿಂಹ ಕಾಮತ್, ಹಾರಾಡಿ ರಾಮಗಾಣಿಗ, ಮಟಪಾಡಿ ವೀರಭದ್ರ ನಾಯಕ್, ಕೋಟ ವೈಕುಂಠ ದಿವಂಗತ ಪದ್ಮಶ್ರೀ ಚಿಟ್ಟಾಣಿ ರಾಮಚಂದ್ರ ಹೆಗಡೆ ಮೊದಲಾದ ದಿಗ್ಗಜರನ್ನು ಕುಣಿಸಿದ ಕೀರ್ತಿ ನಾರಣಪ್ಪ ಉಪ್ಪೂರರದ್ದು. ಬಡಗುತಿಟ್ಟಿನ ಮಾರ್ವಿ ಶೈಲಿಯ ರಾಜ್ಯ ಪ್ರಶಸ್ತಿ ವಿಜೇತ ಭಾಗವತರು. ಪರಸ್ಪರ ೨ ಮೇಳಗಳ ನಡುವೆ ಜಿದ್ದಾಜಿದ್ದಿನ ಸ್ಪರ್ಧೆ ಇರುವ ಜೋಡಾಟದಲ್ಲೂ ಎತ್ತಿದ ಕೈ ಆಗಿದ್ದ ಉಪ್ಪೂರರೂ ಶೃತಿ ಏರಿಸಿ ಹಾಡಿದ ಪರಿಣಾಮ ಹೃದಯಾಘಾತದಿಂದ ಕಲಾಯಾನ ಮುಗಿಸಬೇಕಾದ ದುರಂತ ಯಕ್ಷರಂಗಕ್ಕೆ ಎದುರಾಯಿತು. ೧೯೮೪ ರ ಎಪ್ರಿಲ್ ೧೨ ರಂದು ತಮ್ಮ ೬೬ ನೇ ವಯಸ್ಸಿನಲ್ಲಿ ಗಾಯನ ನಿಲ್ಲಿಸಿದ ಉಪ್ಪೂರರು ಅಭಿಮಾನಿಗಳ ಮನದಲ್ಲಿ ಇಂದಿಗೂ ಶಾಶ್ವತ ಸ್ಥಾನ ಪಡೆದಿದ್ದಾರೆ.

**ಟಿಪ್ಪಣಿ :**

೧೯೮೦ರ ತಿರುಗಾಟದಲ್ಲಿ ಅಮೃತೇಶ್ವರಿ ಮೇಳದಲ್ಲಿ ಆಡಿ ಪ್ರಸಿದ್ಧವಾದ ಪ್ರಸಂಗಗಳಲ್ಲಿ ಒಂದು.

# ಪ್ರಸಂಗ ಸಾಹಿತ್ಯ

**ಭಾಮಿನಿ**
ಕರಿವದನ ಸಿರಿ ಸರಸತಿಗೆ ಸರ |
ಸಿರುಹನೇತ್ರಗೆ ಹರಗೆ ವಾಣೀ |
ಶ್ವರಗೆ ಸುರರಿಗೆ ಮಾರುತಿಗೆ ಗುರು ರಾಘವೇಂದ್ರರಿಗೆ ||
ವರ ಕವೀಶ್ವರರಿಂಗೆರಗಿ ನಾ |
ನೊರೆವೆ ನೀ ಸತ್ಕೃತಿಯನಮೃತೇ |
ಶ್ವರಿಯ ಕೃಪೆಯಿಂದಖಿಳ ಜನರಾಲಿಪುದು ಮೆರೆಸುವುದು || 1 ||

**ಸಾಂಗತ್ಯ - ರೂಪಕ**
ವರ ಗಣಾಧಿಪನ ಶ್ರೀ | ಗುರು ಹರಿಹರರ ಸಂ |
ಸ್ಮರಿಸುತ ಬರೆವೆ ನೀ ಕೃತಿಯ ||
ಅರಿಯೆ ನಾ ಗಣ ಪ್ರಾಸ | ದೋಷವ ಕರುಣದಿ |
ಪೊರೆವುದು ಶರಣು ಶರಣೆಂಬೆ || 2 ||

**ಮಧುಮಾಧವಿ - ತ್ರಿವುಡೆ**
ಸುರಪನೋಲಗವಿತ್ತು ನೆರೆದಿಹ |
ತರಣಿಜಾದ್ಯರೊಳೆಂದ ನಮ್ಮಯ |
ಪರಮ ವಿಕ್ರಮ ದಿತಿಕುಮಾರರೊಳ್ |
ಮೆರೆಯಲಿಲ್ಲೈ ತಿಳಿಯಲು || 3 ||
ದುರುಳನಾದ ಹಿರಣ್ಯ ಕಶ್ಯಪು |
ವರದ ಬಲದಿಂ ನಮ್ಮ ಓಡಿಸೆ |
ಸುರರ ಶೌರ್ಯವು ವ್ಯರ್ಥವಾದುದು |
ಧುರದಿ ಜಯಿಸದೆ ಸೋತೆವು || 4 ||
ಇಂದಿಗೂ ಬಿಡರೆಮ್ಮ ಗರ್ವದಿ |
ಬಂದು ಕಾಡುತಲಿಹರು ವೈರವ |
ನೆಂದಿಗೂ ಬಿಡದಿದಕೆ ಮಾರ್ಗವ |
ನಿಂದು ಪೇಳಿರಿ ಸಕಲರು || 5 ||

**ಸೌರಾಷ್ಟ್ರ – ತ್ರಿವುಡೆ**
ಸುರಪ ಬಿಡು ಚಿಂತೆಯನು ನಾಕಕೆ |
ಬರಲು ದೈತ್ಯರ ಗಣ್ಯವಿಲ್ಲೈ |
ವರದ ಬಲವಲ್ಲದಿರೆ ಬಡಿವೆನು | ಧುರದೊಳವರ || 6 ||

**ಕಾಂಬೋಧಿ - ಝಂಪೆ**
ದೈತ್ಯ ರೆಮ್ಮಯ ಪುರಿಗೆ | ಮತ್ತೆಮತ್ತೈತಂದು |
ಮುತ್ತಿದರೆ ಹರಿದಯದಿ | ಶಕ್ತಿ ಮೆರೆಸುವೆನು || 7 ||

**ಸಾಂಗತ್ಯ - ರೂಪಕ**
ಅಕ್ಕನಣುಗರೆಂದು | ಹಕ್ಕು ಸ್ಥಾಪಿಸ ಬರೆ |
ಸೊಕ್ಕ ಮುರಿವೆ ರಣದೊಳಗೆ ||
ಮಕ್ಕಳಾಟಿಕೆಯಲ್ಲ ಭಕ್ತ ವತ್ಸಲನಾಜ್ಞೆ |
ಮಿಕ್ಕಿದರನುಭವಿಸುವರು || 8 ||
ಸೈರಿಸಿ ಸುರರೆಲ್ಲ ಪೌರುಷವಿಹುದಾದ |
ರೀರೀತಿ ಭಯಕೆ ಕಾರಣವ ||
ಶಾರದೆವರನ ವಿಚಾರವನರಿಯುವ |
ಸಾರುತೆಲ್ಲರು ಸತ್ಯಪುರಕೆ || 9 ||

**ಕುಂಭಕಾಂಬೋಧಿ - ಅಷ್ಟ**
ಬಾರಯ್ಯ ಸುರಪಾಲ ವರುಣಾಗ್ನಿ ಮರುತರೆ || ಬನ್ನಿ ಬನ್ನಿ ||
ಸುರ | ವಾರವೆ ಬಂದಿಹ ಕಾರಣ ವರುಹಿರಿ || ಕುಳ್ಳಿರಿಲ್ಲಿ || 10 ||

**ಪೀಲು - ಅಷ್ಟ**
ಸತ್ಯಲೋಕಾಧೀಶ ಸತ್ಯಧರ್ಮದೊಳು |
ಚಿತ್ತಶುದ್ಧದಿ ನಡೆ ನುಡಿಯಿರ್ದು ಕೇಳು ||
ದೈತ್ಯರ ಬಾಧೆ ಬಪ್ಪುದು ತಪ್ಪದೆಮಗೆ |
ಕೃತ್ಯಕೆ ಕಾರಣವರುಹು ನೀನೆಮಗೆ || 11 ||
ಸುರಪಾಲ ಕೇಳ್ ಕರ್ಮಬಂಧ ಲೋಕದೊಳು |
ಹರಿಹರರಿಗು ಬಿಡದೆಂದಿಗು ಕೇಳು ||
ನಿರತ ನಾಟಕದಂತೆ  ಪ್ರಳಯದಂತ್ಯದೊಳು |
ಸರುವವೈಕ್ಯವು ಶಕ್ತಿಯಾಟವು ಕೇಳು || 12 ||

**ಶಂಕರಾಭರಣ - ಏಕ**
ಏಕೆ ಯೋಚಿಸುವೆಯ ಬರಿದೆ |
ನಾಕಪಾಲ ತಿಳಿದು ನೋಡು ||
ಏಕೆ ಕಷ್ಟ ಸುಖವು ಕರ್ಮ | ವೇಕೆ ಬಲ್ಲೆಯ || 13 ||
ಸುರಪ ಯೋಚಿಸದಿರು ಮನದ |
ಹರುಷ ನಿತ್ಯವಿರಲು ಶುಚಿಯು |
ತೊರೆಯೆ ಕರ್ಮ ಬಂಧವದುವೆ | ಸ್ವರ್ಗ ಸಾರ್ಥಕ || 14 ||
ಮನದ ಮಲಿನತೆಯನೆ ತೊಳೆದು |
ಮಿನುಗಲದುವೆ ಬ್ರಹ್ಮ ಪದವಿ |
ಸುರರು ನರರು ಸಕಲರಿದನು  | ಅರಿತು ನಡೆಯಲಿ || 15 ||

**(ಆ ದಿನ ಸುಘೋಷಿಯ ನೃತ್ಯವನ್ನು ಏರ್ಪಡಿಸುವಂತೆ ದೇವೇಂದ್ರನಿಗೆ ಹೇಳುವನು)**

**ಭೈರವಿ - ಝಂಪೆ**
ಧರ್ಮಪುರದರಸ ಸದ್ಧರ್ಮದಿಂದಾಳುತಿರೆ |
ಧರ್ಮಪ್ರಭು ಸತ್ಯಗುಣ ಶರಧಿ||
ಧರ್ಮ ದೇವತೆಯೆಂದು ಪ್ರಜೆಗಳೆಲ್ಲರು ಪೊಗಳೆ |
ಕರ್ಮ ಭೂಮಿಯ ಫಲವಿದೆಂದು || 16 ||
ಸತಿಯು ಗರ್ಭವನಾಂತು ಸತತ ನವಮಾಸ ತುಂ|
ಬಿತು ವಿಜಯ ಶ್ರೀಗೆ ಶುಭಗಳಿಗೆ ||
ಸುತನುದಿಸೆ ಜನ್ಮ ಪಾವನವೆನ್ನ ಪ್ರಜೆಗಳೀ |
ಕ್ಷಿತಿಗೊಡೆಯನೆಂದು ನಲಿಯುವರು || 17 ||
ಉದಿಸುವನೊ ಸುತ ವಂಶಕಧಿಕ ಶೋಭೆಯನಿತ್ತು |
ಹೃದಯ ಹಂಬಲಿಸುತಿಹುದದಕೆ ||
ಸುದತಿಯುದಿಸಿದರೆನ್ನ | ರಾಜ್ಯಪಾಲನೆಗಾಕೆ |
ಒದಗುವಳೆ ದೈವೇಚ್ಛೆಯೆಂತೊ || 18 ||

**ಪುನ್ನಾಗತೋಡಿ - ಏಕ**
ಬರಿದೆ ಯೋಚಿಸದಿರು ಮನದಿ | ಭೂಮಿ ಪಾಲ || ಪುಣ್ಯ |
ಚರಿತ ಸದ್ಗುಣಾಢ್ಯ ನೀನು | ಧರಣಿ ಪಾಲ || 19 ||
ಧರ್ಮರಾಯನೆಂದೆ ಬಿರುದು | ಭೂಮಿಪಾಲ || ಸತ್ಯ |
ಧರ್ಮ ನಿನ್ನ ಬಿಡದು ಎಂದೂ | ಧರಣಿಪಾಲ || 20 ||

**ಕಂದ**
ಇಂತಾ ಮಂತ್ರಿಯ ಮಾತಿಗೆ |
ಚಿಂತೆಯನುಳಿದಲ್ಲಿ ಭೂಪನಿರೆ ಸಖಿಯೋರ್ವಳ್ |
ಕಾಂತೆಯ ಪರಿಯಂ ಧರಣೀ |
ಕಾಂತಗೆ ಬಂದಲ್ಲಿ ಭರದಿ ವಂದಿಸಿ ನುಡಿದಳ್ || 21 ||

**ಕುಂಭಕಾಂಬೋಧಿ - ಅಷ್ಟ**
ಜನಪಾಲ ಕೇಳ್ ನಮ್ಮ | ಜನನಿ ವಿಜಯಶ್ರೀಗೆ | ರಾಜಮೌಳಿ || ಬಲು |
ಸನಿಹದಿ ಹೆರಿಗೆಯ ನೋವು ಸಂಭವಿಸಿದೆ | ರಾಜಮೌಳಿ || 22 ||
ಮತ್ತೋರ್ವಳೈತಂದು ಬಿತ್ತರಿಸಿದಳಾಗ || ರಾಜಮೌಳಿ || ಸು |
ಪುತ್ರನೆ ಜನಿಸಿದ ರತ್ನ ಸುವರ್ಣನು | ರಾಜಮೌಳಿ || 23 ||

**ಮಧುಮಾಧವಿ - ತ್ರಿವುಡೆ**
ಪೂತವಾಯ್ತುಹ ವಂಶವಿದು ವಿ |
ಖ್ಯಾತವಾಯಿತು ಭರಿತ ಸಂಪದ |
ವೀ ತರಳನಿಂದೀಗ ಜನ್ಮ ಪು |
ನೀತವಾಯಿತು ಜನ್ಮವು || 24 ||
ಎಂದು ಕರೆಸುತ ಕುಲಪುರೋಹಿತ |
ರಿಂದ ತರಳನ ಜನ್ಮಕಾಲವ |
ನಂದದಿಂ ಕೇಳಲ್ಕೆ ಫಲವ ನೃ |
ಪೇಂದ್ರಗರುಹಿದರಾಗಲೆ || 25 ||

**ಭಾಮಿನಿ**
ಅರಸ ಧೈರ್ಯವ ತಾಳು ಸುತನುದಿ |
ಸಿರುವ ಕಾಲವು ದೋಷವಿಹುದಿವ |
ಸ್ಮರ ಸಮಾನನು ಭರಿತ ಕಾಮಿಯು ಕುಟಿಲ ಚಂಚಲನು ||
ತರಳನಿಗೆ ಸರಿಯಾದ ವಿದ್ಯೆಯ |
ಪರಿಸರವ ನೀನಿತ್ತುದಾದರೆ |
ಸರಿಯಹುದು ರತ್ನಾಂಗನೆಂದೇ ಪೆಸರು ಶೋಭಿಸಲಿ || 26 ||

**ಘಂಟಾರವ - ಝಂಪೆ**
ತರಳ ರತ್ನಾಂಗ ತಾ ಭರಿತ ಯೌವ್ವನನಾಗಿ |
ಗುರುಮುಖದಿ ವಿದ್ಯೆಯನ್ನರಿತು ||
ಪೊರಟ ಟೀಕಿಸುತ ಗುರುಗಳ ಸಖ ವಿನೋದನೊಡ |
ನರಮನೆಗೆ ನಡೆತಂದನಂದು || 27 ||

**ಕೇದಾರಗೌಳ - ಝಂಪೆ**
ತಂದೆಗಭಿನಮಿಸಲಾಗ | ಬಿಗಿದಪ್ಪಿ |
ಕಂದನನು ನೃಪತಿ ಬೇಗ ||
ಚಂದದಿಂ ವಿದ್ಯೆಗಳನು | ಕಲಿತೀಗ |
ಬಂದೆಯಾ ಪೇಳು ನೀನು || 28 ||
ಬಗೆಬಗೆಯ ಜೀವಿಗಳನು | ಜೀವನದ |
ಬಗೆಬಗೆಯ ಕಷ್ಟಗಳನು ||
ಸೊಗಸಾದ ತಂತ್ರಗಳನು | ಕಲಿತಿರ್ಪೆ |
ಜಗದ ಕೌಶಲ್ಯಗಳನು || 29 ||
ಎನ್ನ ಮನದುಂಬಿ ಸತತ | ಹರಸುವೆನು |
ನಿನ್ನ ನಡೆನುಡಿಯೊಳ್ ನಿರತ ||
ಉನ್ನತಿಕೆ ತೋರಿ ಬಾಳು | ಸತ್ಯ ಧ |
ರ್ಮಾನ್ವಿತಗೆ ಯಶವು ಕೇಳು || 30 ||

**ಕಂದ**
ತಂದೆಯ ಬೀಳ್ಕೊಳುತಾ ನೃಪ |
ಚಂದ್ರನಸುತತಾನು ಜನನಿಯಿರ್ಪೆಡೆಗೈದಲ್ ||
ಕಂದನ ಬಿಗಿದಪ್ಪುತ ನಲ |
ವಿಂದಾಕೆಯು ಪೊಗಳಿ ಮುದ್ದಿಸಿದಳತ್ಯಧಿಕಂ|| 31 ||

**ಮಧುಮಾಧವಿ - ತ್ರಿವುಡೆ**
ಬಂದೆಯಾ ಮಮ ಮುದ್ದು ಬಾಲಕ |
ಚಂದದಿಂ ವಿದ್ಯೆಗಳನೆಲ್ಲವ |
ನೊಂದುಳಿಯದರಿತಿಹೆಯ ಸಂತಸ |
ವಿಂದಧಿಕವೆನಗಾಯ್ತುಹ || 32 |
ಯಾರಿಹರು ಸರಿ ನಿನಗೆ ಈ ಧರೆ |
ಭೂರಿ ಭಾಗ್ಯವು ನಿನ್ನದಾಗಿರೆ |
ಸಾರಸುಖವನುಭವಿಸು ಮಗು ಮುದ |
ವೇರಿ ರಾಜ್ಯವ ಪಾಲಿಸು || 33 ||

**ಭೈರವಿ - ಝಂಪೆ**
ಇಂತು ಕೆಲಕಾಲಸಲೆ ಸಂತಸದಿ ರತ್ನಾಂಗ |
ಅಂತರಂಗದಿ ಸ್ವೇಚ್ಛೆಯಿಂತು ವಿಹರಿಸುತ ||
ಪುರವನದಿ ತರುಣಿಯರ ಸಿರಿಸೊಬಗನೀಕ್ಷಿಸುತ ||
ಹರುಷಗೊಂಬನು ಮನದಿ ಪರಿಹಾಸ್ಯಗೆಯ್ಯು || 34 ||

**ಕಲ್ಯಾಣಿ - ತ್ರಿವುಡೆ**
ಪೃಥ್ವಿಪನರಸಿಯ ಮಿತ್ರೆಯರೊಳಗೆ |
ಸತ್ಯ ಸದ್ಗುಣಿ ರೂಪವಂತೆಯರೊಳಗೆ ||
ಉತ್ತಮೆ ಕೌಮುದಿ ಪುರವನದೊಳಗೆ |
ಕೃತ್ತಿವಾಸನ ಪೂಜೆಗೆಂದು ತ್ವರೆಯೊಳಗೆ |
ಚಿತ್ರತರ ಕುಸುಮಗಳ ಸೊಬಗನು |
ಮತ್ತೆ ಮತ್ತಡಿಯಿಡುತ ನೋಡುತ |
ಅತ್ಯಧಿಕ ತೋಷದೊಳು ಕೊಯ್ಯುತ |
ಮಿತ್ರೆಯರ ತಾನಗಲಿ ಬಂದಳು || 35 ||

**ಜಂಜೂಟಿ - ಅಷ್ಟ**
ಕಂಡು ರತ್ನಾಂಗ ಸುಂದರಿಯ || ಆಸೆ |
ಗೊಂಡು ವಿನೋದನ ಬಳಿಯ ||
ಕಂಡುದಿಲ್ಲಹಹ ಭೂಮಂಡಲದೊಳು ಚಲ್ವೆ |
ಗಂಡುಗಲಿಗಳನ್ನು ಭಂಡು ಮಾಡುವಳೀಕೆ || 36 ||
ಕರೆದು ಮಾತಾಡಿಸಲಿವಳ | ಮನಸು |
ಬೆರೆತು ಒಂದಾದ ಮೇಲ್ಬಹಳ ||
ಬರಲೆನ್ನ ಸಾವು ಸಂಭವಿಸಲಿ ನರಕ ಕಾ |
ತರ ದಾಹ ತಡೆಯೆನಾ ತರುಣಿಯ ನುಡಿಸುವೆ || 37 ||

**ಮೋಹನಕಲ್ಯಾಣಿ - ಏಕ**
ಸುಮವ ಕೊಯ್ಯುವ ಚಲುವೆ || ಯಾರೆಲೆ ನೀನು |
ಕಮಲಲೋಚನೆಯೆ ಬಾಲೆ ||
ಸುಮಶರ ಸತಿಯ ಸೌಂದರ್ಯವ ಮಿಗಿಸುವ |
ಕಮನೀಯ ಗಾತ್ರೆ ಕರಿಗಮನೆ ಪನ್ನಗವೇಣಿ || 38 ||
ಏಕೆನ್ನ ವರ್ಣಿಸುವೆ | ಸೌಂದರ್ಯದ |
ಸಾಕಾರವೆನುತಿರುವೆ ||
ಸಾಕು ವರ್ಣನೆ ಅವಿವೇಕಿಗಳಂತೆ ನೀ |
ಪೋಕತನದ ನುಡಿಯಾಕಾಡುತಿಹೆ ನಡೆ || 39 ||
ಈರೇಳು ಭುವನದೊಳು | ನಿನ್ನನು ಪೋಲ್ವ |
ನೀರೆಯರಿಲ್ಲ ಕೇಳು ||
ಈ ರೂಪ ಸೌಂದರ್ಯಾಕಾರಕೆ ಮನಸೋತೆ |
ನಾರಿ ರನ್ನೆಯೆ ದಯೆ | ದೋರಿ ನೀ ಬಾ ಜಾಣೆ || 40 ||

**ಮಾಂಡ್ - ರೂಪಕ**
ತರವಿದಲ್ಲ ಬಾಲತನದಿ ನುಡಿಲಾಗದು ||
ಅರಸಿಯಾಪ್ತೆ ನಾನು ಇಂಥ ನಡತೆ ಸಲ್ಲದು ||
ತೆರಳು ಮನೆಗೆ ಬರಿದೆ ನಿನ್ನ ಒಲಿವಳಲ್ಲವು ||
ಅರಸಿಗೆಲ್ಲ ವರುಹೆ ನಿನಗೆ ಬಹುದು ಕಷ್ಟವು || 41 ||
ತರುಣಿ ರನ್ನೆ ಏತಕಿಂತು ಒರೆವೆ ನಿಷ್ಠುರ |
ನರಪ ಜಾತ ಪರಿಕಿಸೆನ್ನ ಮನದ ಕಾತರ ||
ಕರವ ಮುಗಿವೆ ನೋಡು ಕರುಣೆಯಿರಿಸು ತ್ವರೆಯಲಿ |
ಪರಮಸುಖವ ನೀಡು ಸ್ಮರನ ಕೇಳಿಯಿಂದಲಿ || 42 ||

**ಹಂಸಧ್ವನಿ - ಝಂಪೆ**
ಗಳಹದಿರು ಭೂಪಸುತ ಹುಳವಪ್ಪುದೆಲೆ ಬಾಯೊ |
ಳಿಳೆಯರಸನೆಂಬ ಭ್ರಮೆಯಿಂದ ||
ಛಲವ ತೋರಿದರೀಗ ಫಲವಾಗದೆಚ್ಚರಿಕೆ |
ಗಳನೊರೆವೆನೆನಲು ಖತಿಗೊಂಡ || 43 ||

ಸಾಕು ಸಾಕೆಲೆ ತರುಣಿ | ಯೇಕೆನ್ನ ಬೆದರಿಸುವೆ |
ಈ ಕ್ಷಣದೊಳೆನ್ನ ಕೂಡದಿರೆ ||
ಜೋಕೆ, ಬಿಡುವವನಲ್ಲ ಭಯವಿಲ್ಲ ನೋಡೆಂದು |
ಆ ಕೌಮುದಿಯ ಬಳಿಗೆ ಬರಲು || 44 ||

**ಹಂಸಧ್ವನಿ - ಕೋರೆ (ದ್ವಂದ್ವ)**
ತೋರಬೇಡ ಛಲವ ನಿನ್ನ ಸೇರಲಾರೆನು ||
ನೀರೆ ಹಟವ ಮಾಡೆ ಬಿಡೆನು ನೀಡು ಸುಖವನು || 45 ||
ನಾರಿ ಬೆದರಿ ಓಡುತಿರಲು ದೂರದೂರಕೆ |
ಬಾರೆ ಬಾ ಬಾರೆಂದು  ಪಿಡಿದ ಸೀರೆ ಸೆರಗನು || 46 ||

**ಕಂದ**
ಕೊಳದಿಂದೆಸೆದಾ ಕೋಮಲ |
ಮೃಣಾಲಲತೆಯಂತೆ ನೆಲದಿ ಬಿದ್ದಳಳುತ ತಾ ||
ಜಲಜದಳಾಂಬಕಿ ತನ್ನೀ |
ಮಲಿನತೆಗೇನ್ ಗೈವೆ ಯಾರೊಳೊರೆಯುವೆನಿದನಾಂ|| 47 ||

**ಆನಂದ ಭೈರವಿ - ರೂಪಕ**
ಭೂರಮಣನ ಸುತನಿಗೆ ನಾ |
ಮಾರಿದೆ ಶೀಲವ ರಕ್ಷಣೆ |
ಗಾರೊದಗುವರಕ ಟಕಟಾ | ತೀರಿತೆ ಮಮ ಬಾಳ್ವೆ || 48 ||

**ಧನ್ಯಾಸಿ - ಅಷ್ಟ**
ಅರುಹುವೆ ದುಃಖವ ಮಹರಾಣಿಗೆನುತಲಿ |
ಬರಲಾಕೆಯನ್ನು ಕಂಡು ||
ಅರಸಿ ಸಂತೈಸುತ ಬೆಸಗೊಂಡಳ್ಯಾಕಿಲ್ಲಿ |
ಮರುಗುತ ಬಂದೆಯಲ್ಲೆ || 49 ||
ಅಮ್ಮ ಈ ದುರ್ಗತಿಯನ್ಯರಿಂದಲ್ಲವು |
ನಿಮ್ಮಾತ್ಮಜನಿಂದಲಿ |
ನಿಮ್ಮ ಆಶ್ರಯದಲ್ಲಿ ಬೆಳೆದೊಂದು ಜೀವಕೆ |
ನಿಮ್ಮಿಂದ ರಕ್ಷೆ ನೀಡಿ || 50 ||

**ಬಿಲಹರಿ - ರೂಪಕ**
ಸಾಕು ಸಾಕೆ ಹಲುಬಬೇಡ | ಲೋಕವೊಂದು ಮಾಡಿ ||
ಜೋಕೆಯಿಂದ ಪೋಗು ನೀ ವಿ | ವೇಕದಿಂದ ಕೂಡಿ ||
ಮೂಢನಲ್ಲ ಮಗನು ನಿನಗೆ ಕೇಡು ತಾರನವನು |
ರೂಢಿಪಾಲತಿಲಕನಹನು | ಖೋಡಿ ಮಾತಿದೇನು || 51 ||

**ಪೂರ್ವಿ - ರೂಪಕ**
ಅಮ್ಮಾ ನೀವಾಡುವ ನುಡಿ ತರವಲ್ಲವು |
ನಿಮ್ಮರಮನೆಯಲ್ಲಿ ಇರಬೇಕು ನಾವು ||
ದಮ್ಮಯ್ಯ ನಿಷ್ಠುರವೇಕೆ ಮಗನ ನಡೆ |
ಹೆಮ್ಮೆಗೊಳುವದಲ್ಲ ಕಷ್ಟವಾಯ್ತಿನ್ನು || 52 ||
ಕಷ್ಟವಾದರೆ ನಡೆ ಬಿಟ್ಟರಮನೆಯ ನೀ |
ನೆಷ್ಟರವಳು ನಮ್ಮ ನಡತೆ ಪ್ರಶ್ನಿಸಲು ||
ಸೃಷ್ಟಿಪಾಲಕನರಮನೆಯ ದಾಸಿಯು ತಿಳಿ |
ದಷ್ಟರೊಳಿರೆ ಸಾಕು ನಡೆ ನುಡಿಯದಿರು || 53 ||

**ವಾರ್ಧಕ**
ಮಗನ ನಡತೆಯು ತಾಯ್ಗೆ ಮಿಗಿಲಾಟವಾಯ್ತಿನ್ನು |
ಜಗದಿ ಬಾಳುವೆನೆಂತು ಶೀಲವನ್ನೀಡಾಡಿ |
ಹಗೆ ಬಿಡೆನು ಭೂಪಸುತರಾಜಾಜ್ಞೆ ಶಿಕ್ಷೆ ತಪ್ಪದು ನಿನಗೆ ನೋಡೆನ್ನುತ ||
ದುಗುಡ ಉದ್ವೇಗ ಕಡುಹಟದಿಂದ ರಾಜನ |
ಲ್ಲಿಗೆ ಪೋಗಿ ಪೇಳು ಪರಿಹಾರವಿನ್ನಿದಕೆ ನಾ |
ಲಗೆಯಡಗದಿರಲೆನ್ನ ಶೀಲವಂ ಕೆಡಿಸಿದಂ ನಿನ್ನಣುಗ ಧರ್ಮಪ್ರಭುವೇ || 54 ||

**ಶಿವರಂಜಿನಿ - ಝಂಪೆ**
ಕೊಡು ಶಿಕ್ಷೆ ರಾಜನಾದರೆ ಧರ್ಮದಕ್ಷತೆಯ |
ನಡತೆಯಿರ್ದರೆ ಪ್ರಜೆಗಳಲ್ಲಿ ||
ಹುಡುಗ ತನ್ನವನೆಂಬ ಕಡುಮೋಹವಾದಪುದೆ |
ಪೊಡವಿಯಾಣ್ಮಗೆ ಧರ್ಮಪಥದಿ || 55 ||

**ವಸಂತ - ತ್ರಿವುಡೆ**
ಮರುಗಿದನು ಮನವಾರೆ ಸುತನಿಗೆ |
ಗುರುಗಳಾಡಿದ ಮಾತು ಸತ್ಯವು |
ಹರಹರಾ ಕುಲಕಂಟಕನ ತೆರ | ನಿರುವನೆಲ್ಲವ ತಿಳಿದೆನು | ಪ್ರಜೆಗಳಿಂದ || 56 ||
ವನಿತೆ ಕೋಪಿಸಿ ನುಡಿದಳಾತನ |
ಗುಣಕೆ ಮರುಗಿದರೇನು ಶಿಕ್ಷೆಯ |
ಜನಪನಾಗಿಯೆ ವಿಧಿಸು ತಪ್ಪಿದ| ರೆನಗೆ ಮರಣಕೆ ಆಜ್ಞೆಯ | ನೀಡು ದೊರೆಯೇ || 57 ||

**ಮೋಹನ - ತ್ರಿವುಡೆ**
ನಡತೆ ತಪ್ಪಿದ ಮಗನ ರಾಜ್ಯದ |
ಗಡಿಗೆ ನೂಕುವೆನೆಂದು ಕರೆಸುತ |
ಪೊಡವಿಪತಿ ಕ್ರೋಧದಲಿ ಮಮತೆಯ | ತೊಡೆದು ಕಳೆದು || 58 ||
ತೆರಳು ನೀನೀ ರಾಜ್ಯದಿಂದಲಿ |
ತ್ವರೆಯೊಳೀಕೆಯ ಭಂಗಿಸಿದಕೆನು |
ತಿರಲು ಧರಣಿಪಕಾಂತೆ ಬಂದದ | ನರಿತು ತಡೆದು || 59 ||

**ಆರ್ಯಸವಾಯ್ – ಏಕ**
ಕೂಡದು ನೀವ್‌ಛಲ ಮಾಡುತ ಕುವರನ |
ಮೂಢರಂತೆ ಹೀಗಾಡುವಿರೇ ||
ಬೇಡುವೆ, ಕ್ಷಮೆಯನು ಕರುಣಿಸಬೇಕೆಂ |
ದಾಡಿದಳತಿ ಹಟ ಮಾಡಿದಳು || 60 ||
ತರಳನ ಕರೆದಿನ್ನರಿತು ವಿಚಾರವ |
ಚರಣಕೆ ಮಣಿ ಹೋಗೆಂದೆನುತ ||
ದುರುಳತನಕೆ ಮನ ಮಾಡನು ಮುಂದಕೆ |
ತೊರೆಯಿರಿ ಕ್ರೋಧವ ನಿನ್ನೆನಲು || 61 ||

**ತೋಡಿ - ಅಷ್ಟ**
ಅರಿತುಕೊಂಡನು ದುಷ್ಟ ತಂದೆಯ ರಾಜ್ಯದಿ |
ಇರಲಾರೆನೆಂದೆನುತ ||
ತೊರೆದನು ಪ್ರಜೆಗಳ ಹಿತಕಾಗಿ ಎನ್ನನು |
ತರಳನೆಂದಿಲ್ಲ ಪ್ರೀತಿ || 62 ||
ಬಿಟ್ಟು ರಾಜ್ಯವ ಪೋಗಿ ಸೃಷ್ಟಿಪಾಲಕರನ್ನು |
ಒಟ್ಟುಗೂಡಿಸಿ ಧುರದಿ ||
ಕುಟ್ಟಿ ಕಳೆವೆನಿವನಷ್ಟಭೋಗಕ್ಕಿಂತ |
ಶ್ರೇಷ್ಠನಾನೆನಿಸುವೆನು || 63 ||

**ಸೌರಾಷ್ಟ್ರ – ತ್ರಿವುಡೆ**
ಎನುತ ಮಗನಾರರಿಯದಂತೆ |
ಮನ್ಮನು ತೊರೆದು ಪೋದುದನು ತಿಳಿದಾ |
ವನಿತೆ ಬರಸಿಡಿಲೆರಗಿದಂತಿಳೆ | ಗೊರಗಿ ಅಳಲು || 64 ||

**ನೀಲಾಂಬರಿ - ಕೋರೆ**
ಶಿವನೇ ಎಲ್ಲಿ ಪೋದನೆನ್ನ | ಕುವರ ವಂಶ ರತುನಾ ||
ಬವಣೆಯೆಷ್ಟು ಗೊಳುವೆ ನಯ್ಯೋ | ಧವನೇ ಹುಡುಕಿಸವನ || 65 ||
ನಿಮ್ಮ ಕಠಿಣ ಮಾತಿನಿಂದ || ನಮ್ಮ ತೊರೆದು ಪೋದ ||
ಧರ್ಮ ಸತ್ಯವೆಂದು ಬಾಳಿ | ಬ್ರಹ್ಮ ನಿಂತು ಬರೆದ || 66 ||

**ಭಾಮಿನಿ**
ಬರಿದೆ ಚಿಂತಿಸದಿರು ವಿವೇಕದಿ |
ಅರಿತುಕೊ ತಾಗೈದ ಕೃತ್ಯಕೆ |
ಮರುಗಿ ತೆರಳಿಹನವನ ಪುಡುಕಿಸಿ ತರುವೆ ಕೆಲದಿನದಿ ||
ತರುಣಿ ತನ್ನಯ ಮಗನ ಕಷ್ಟಕೆ |
ದುರುಳೆ ಸಖಿ ಕಾರಣಳು ಎನ್ನುತ |
ಕರೆಸಿದಳು ಕ್ರೋಧದಲಿ ಕೊರಳರಿಸಿದಳು ಕಟುಕರಲಿ ||67||

**ಸೌರಾಷ್ಟ್ರ - ತ್ರಿವುಡೆ**
ಅಂದು ವನವನ ತಿರುಗಿ ನೃಪಸುತ |
ಬಂದು ತಾ ಗಾಂಧಾರ ದೇಶಕೆ |
ಇಂದು ಬಳಲಿದೆ ಬಹಳ ವ್ಯರ್ಥದಿ | ನೊಂದೆನಕಟಾ || 68 ||
ತಾತನೆನ್ನನು ಕ್ಷಮಿಸುತೀರ್ದನು |
ಖಾತಿಯಿಂದಾಂ ಬಂದೆನೇತಕೆ |
ಸೋತು ಹಿಂದಕೆ ತೆರಳಲೆಂತಿ | ನ್ನೀತೆರದಲಿ || 69 ||

**ಕಾಪಿ - ಅಷ್ಟ**
ಎಂದು ಬರುತ ಉದ್ಯಾನದಲಿ || ಸುಮ |
ವೃಂದವೀಕ್ಷಿಸುತಲಲ್ಲಲ್ಲಿ ||
ನಿಂದು ಛಾಯಾರಿ ನೀರರಸುತ ಮುಂದಕೊಂ |
ದೊಂದಡಿಯಿಡುತ ನೋಡಿದ ರಾಜಕುವರ || 70 ||
ತಿಳಿಕೊಳದಲಿ ನೀರ ಕುಡಿದು || ದಡ |
ದಲಿ ನಿಂದು ಕೆಲದಲಿ ಬೆಳೆದು ||
ನಲಿದು ನಿಂದಿಹ ವೃಕ್ಷರಾಜಿಯ ಕಾಣುತ |
ಸುಲಲಿತ ನಿದ್ರೆಗೆ ಹಂಬಲಿಸಿದನಾಗ || 71 ||

**ಭೀಮ್ ಪಲಾಸ್ - ಏಕ**
ಜಲಕ್ರೀಡೆಯಾಡಲು ಬಂದರು || ತಿಳಿ |
ಕೊಳದ ತಡಿಯೊಳಾಗ ನಿಂದರು ||
ನಳಿನದಳಾಕ್ಷಿ ಸುಹಾಸಿನಿ ಸಖಿಯರ ||
ಬಳಗವ ಸೇರುತ್ತ | ಚೆಲುವಿನುದ್ಯಾನದಿ || 72 ||
ಬಾಲೆಯರೆಲ್ಲರು ನಲಿಯುತ್ತ | ವಾರಿ |
ಕೇಳಿಯೊಳಗೆ ಮನವೆಳಸುತ್ತ ||
ಮೇಳದೊಳೆಲ್ಲರು ಸರಸಿಗೆ ಇಳಿದು ಸ |
ಲ್ಲೀಲೆಯೊಳಲ್ಲಿಯೆ ತೇಲುತ್ತ ಮುಳುಗುತ್ತ || 73 ||

**ಬೇಹಾಗ್ - ಅಷ್ಟ**
ಆಡಿದರ್ ಸರಸಿಯೊಳ್ ಸುದತಿಯರೆಲ್ಲರು |
ಕೂಡೆ ನಲಿದು ಕುಣಿದಾಡುತ್ತ ||
ಪಾಡುತ ಕುಣಿಯುತ ಕೂಡೆ ನೀರೆರಚುತ |
ಕ್ರೀಡಿಸುತಿರ್ದರು ನಗುನಗುತ || 74 ||

**ದೇವಗಾಂಧಾರಿ - ಏಕ**
ಜಲಜಗಂಧಿಯರೆಲ್ಲ ಜಲಕೇಳಿಯನು ಬಿಟ್ಟು ||
ಜಲದ ತಡಿಗೆ ಬಂದು ಮಡಿಯ ||
ಒಲಿದುಟ್ಟು ಕೇಶವ ಬಾಚಿ ಕನ್ನಡಿ ನೋಡಿ |
ನಲವಿನಿಂ ವಿಹರಿಸುತಿರಲು || 75 ||

**ಸೌರಾಷ್ಟ್ರ – ತ್ರಿವುಡೆ**
ನಲಿಯುತುದ್ಯಾನದಿ ವಿಹರಿಸುತ |
ಸುಲಲಿತಾಂಗಿ ಸುಹಾಸಿನಿಯು ಬರೆ |
ಮಲಗಿ ನಿದ್ರಿಸಿದವನ ಕಂಡಾ | ಶ್ಚರ್ಯ ತಾಳಿ || 76 ||

**ನವರೋಜು - ಏಕ**
ಅರರೇ ಯಾರಿವನಿಲ್ಲಿ || ಮಲ |
ಗಿರುವನು ತಾ ದಣಿವಿನಲಿ ||
ಸ್ಮರನೊಲು ರೂಪದಿ ಮೆರೆಯುವ ನಮ್ಮೀ |
ಪುರಕಿವ ಪರಿಚಿತನಿರಲಿಲ್ಲಿಗೆ ಬರ || 77 ||

ಮರುಳಾದೆನಿವನಲ್ಲಿ || ನಾ |
ಪರಿಕಿಸದೆ ಗುಣವಿಲ್ಲಿ ||
ಒರೆಯುವದೆಂತೀ ಪುರುಷನೊಡನೆ ಒಂ |
ದರೆ ಮಾತಾಡದೆ ತೆರಳಲಸಾಧ್ಯವು || 78 ||

**ಹಿಂದೋಳ - ಝಂಪೆ**
ಪೋಗಲರಿಯಳು ಬಾಲೆಯು || ನಿಂತು ನಿಲ |
ಲಾಗದತಿ ತ್ವರೆಗೊಂಬಳು ||
ಆಗ ನಿದ್ರೆಯ ತಿಳಿದನು || ವಿಸ್ಮಯಾ |
ವೇಗದಿಂದೀಕ್ಷಿಸಿದನು || 79 ||
ಅರಿತು ಕೊಂಡನು ಕಾಲವ || ದೇಶ ಪರಿ |
ಸರದ ಸುಸ್ಥಿತಿಯ ಭಾವ ||
ತರುಣಿ ಮೊಗದಲಿ ಮಿನುಗುವ || ಮುಗುಳು ನಗೆ |
ಯಿರಲರಿತನದರರ್ಥವ || 80 ||
ಚಲುವೆ ನೀನ್ಯಾರೆ ವನದಿ || ಒರುವಳೆ |
ನೆಲನ ಗೀಚುತ್ತ ಪಥದಿ ||
ನೆಲವಿದ್ಯಾವುದು ನಿನ್ನನು | ಪಡೆದ ಪಿತ |
ಕುಲ ತಿಳಿಸು ಪೆಸರುಯೇನು || 81 ||

**ದೇವಗಾಂಧಾರಿ - ಏಕ**
ತರುಣಿ ನಾಚುತ ಪೇಳ್ದಳ್ ಧರಣಿ ಗಾಂಧಾರ ವೀ |
ಧರೆಗೊಡೆಯನು ಎನ್ನ ಪಿತನು ||
ವರ ಸುಹಾಸಿನಿಯೆಂಬ ಪೆಸರೆನಗಿಲ್ಲಿಗೆ |
ಬರವೇನು ಯಾರು ನೀವೆನಲು || 82 ||
ಧರೆಯೊಳುಜ್ವಲ ಧರ್ಮ ಪುರದರಸನ ಸುತ |
ಕರೆವರು ರತ್ನಾಂಗನೆಂದು ||
ಧರೆಯ ಸಂಚರಿಸುತ್ತ ಬರಲಿಲ್ಲಿ ಉಪವನ |
ಸಿರಿಗೆ ನಾ ಬೆರೆಗಾದೆನೆನಲು || 83 ||

**ಸೌರಾಷ್ಟ್ರ - ತ್ರಿವುಡೆ**
ಕೇಳುತಾಕ್ಷಣ ಮನದೊಳುಬ್ಬುತ |
ಬಾಲೆ ಜನಕನ ನೆನೆದು ನೀವತಿ |
ಲೀಲೆಯಲಿ ಅರಮನೆಗೆ ಬರಬೇ | ಕೆನುತ ಕರೆಯೆ || 84 ||

**ಭೈರವಿ - ಝಂಪೆ**
ಪೃಥ್ವಿಯೊಳು ಗಾಂಧಾರ |
ಪೃಥ್ವಿಪಾಲಕನಾದ |
ಸತ್ಯವಂತ ನೃಪಾಲ |
ನಿತ್ಯನೋಲಗವ || 85 ||

**ಸೌರಾಷ್ಟ್ರ - ತ್ರಿವುಡೆ**
ಬಾಲೆಯರಮನೆಗೈದಿ ಪಿತನೊ |
ಡ್ಡೋಲಗಕೆ ಬಂದೆರಗೆ ಕಾಣುತ |
ಶೀಲೆಯನು ತೆಗೆದೆತ್ತಿ ನುಡಿದನು | ಪ್ರೀತಿಯಿಂದ || 86 ||
ಏನು ಬಂದ್ಯೆ ಮಗಳೆ ನುಡಿ ನಿ |
ನ್ನಾನನದ ಸಿರಿಸೊಬಗು ಬೇರಿಹು |
ದೇನು ಕಾರಣ ಬಳಿಯೊಳಿಹ ಯಾ | ರೀತ ಪೇಳು || 87 ||

**ಕಾಂಬೋಧಿ - ಝಂಪೆ**
ಧರ್ಮಪುರದವನಂತೆ ಧರ್ಮಪ್ರಭು ಸುತನಂತೆ ||
ನಮ್ಮ ರಾಜ್ಯದ ಸೊಬಗ ಕಂಡು |
ನೆಮ್ಮದಿಯೊಳುದ್ಯಾನದೊಳಗಿರಲು ಕರೆತಂದೆ |
ನಮ್ಮ ಅರಮನೆಗೆಂದಳಾಗ || 88 ||
ಅನುಪಮದ ರೂಪ ಯೌವನ ಕಂಡು ಮರುಳಾದೆ |
ಜನಕ ನೀ ಕ್ಷಮಿಸು ಪ್ರೇಮದಲಿ ||
ಅನುನಯದಿ ನೃಪತರಳನೆನ್ನ ವರಿಸುವ ಕಾರ್ಯ |
ವನುಕೂಲಗೊಳಿಸು ನೀನೆನಲು || 89 ||

**ಸೌರಾಷ್ಟ್ರ - ತ್ರಿವುಡೆ**
ಹರುಷಗೊಂಡಾ ನೃಪತಿ ಕಳುಹಿದ |
ತರಳೆಯನು ಬಳಿಕಾ ಕುಮಾರನ |
ಕರೆಸಿಕೊಂಡತಿ ವಿನಯದಲಿ ತಾ | ನೊರೆದನಾಗ || 90 ||
ತಿಳಿದೆ ನಿನ್ನ ವಿಚಾರಗಳ ನೀ |
ನೆಲವ ತ್ಯಜಿಸುತ ಬಂದ ಕಾರಣ |
ತಿಳುಹಿಹುದೆ ಬೇಸರಿಕೆ ನಿಮಗೊಳ ಜಗಳವೆನಲು || 91 ||
ಚರಿಸಿ ದೇಶದ ಸಿರಿಯನೀಕ್ಷಿಪ |
ಭರದಿ ಪೊರಟೆನು ಈಸುದಿನ ಸಂ |
ಚರಿಸಿದೆನು ಬಳಿಕೀಗ ರಾಜ್ಯಕೆ | ಮರಳುತಿಹೆನು || 92 ||

**ಪುನ್ನಾಗ ತೋಡಿ - ಏಕ**
ಧರಣಿಪಾತ್ಮಜ | ಕೇಳು ಮುದದಲಿ |
ತರಳೆ ನಿನ್ನನು | ಮೆಚ್ಚಿಕೊಂಡಳು ||
ವರಿಸು ಪ್ರೇಮದಿ | ಪರಮ ವಿಭವದಿ ||
ಎರೆದು ಧಾರೆಯ | ಸುತೆಯನೀವೆನು || 93 ||

**ಭೈರವಿ - ಝಂಪೆ**
ಪುರವ ಸಿಂಗರಗೈಸಿ ಕರೆಸಿ ಪೌರೋಹಿತರ |
ನಿರಿಸಿ ಲಗ್ನವ ನೃಪತಿ ಎರೆದ ಧಾರೆಯನು || 94 ||

**ಬಿಲಹರಿ - ರೂಪಕ**
ವನಿತೆ ಗರ್ಭವನಾಂತು ಮನದ ಹರ್ಷದಿ ತನ್ನ |
ಇನಿಯನೊಡನೆ ಪ್ರೇಮದಿಂದ ||
ದಿನವುರುಳುತಲಿರೆ ಅನುದಿನ ಬಯಕೆಗೆ |
ಮನವಿಲ್ಲ ಬೇಸರವಾಯ್ತು || 95 ||
ಇನಿಯನೆ ಬೇಸರ ತಾಳ್ವೆನು ನಮ್ಮರ |
ಮನೆಗೆಂದು ಪೋಪುದು ಪೇಳು ||
ಘನವೆತ್ತ ಅತ್ತೆಮಾವಂದಿರ ಕಾಣಲು |
ಮನವು ಹಂಬಲಿಸುತ್ತಲಿಹುದು || 96 ||
ಬೆದರ ಬೇಡವೆ ನಿನ್ನ ಮುದದಿಂದಲೊಯ್ವೆನು |
ಸುದತಿಯೆ ಬಿಡಲಾರೆ ನಿನ್ನ ||
ಸದನಕೆ ಪೋಗಲಿನ್ನೊದಗಿಬಹುದು ಕಾಲ |
ಮುದ ತಾಳಿ ಬೇಸರಿಸದಿರು || 97 ||
ಅವನೀಶ ಸುತ ತನ್ನ | ಮನದಿ ಯೋಚಿಸಿದ ಸಂ |
ಭವಿಸಿತು ನಿಜ ಕಷ್ಟವಿನ್ನು ||
ಇವಳ ಸಂತೈಸುವ ಬಗೆಯೆಂತು ಹೇಗೆ ಪೋ ||
ಗುವದರಮನೆಗೆ ನಾನಿನ್ನು || 98 ||
ತರುಣಿಯ ಬಿಟ್ಟಿಲ್ಲಿಗಾದರೂ ದೂರಕೆ |
ತೆರಳಲು ಸುಖವಹುದೆಂದು ||
ಪೊರಟನಾರಿಗು ಪರಿಯರುಹದೆ ಅಲ್ಲಿಂದ |
ಇರುಳು ಕಗ್ಗತ್ತಲೆಯೊಳಗೆ || 99 ||

**ಸೌರಾಷ್ಟ್ರ - ತ್ರಿವುಡೆ**
ಆತನಲಿ ಹಗೆಯಾಂತು ಮೃತ್ಯು ವಿ |
ಘಾತಿಯಲಿ ಕಡು ನೊಂದ ಕೌಮುದಿ |
ಪ್ರೇತರೂಪದಿ ಬಂದು ಕಾಡು | ತ್ತಿರಲು ಸುತನ || 100 ||

**ಕಂದ**
ಪರಮೇಷ್ಠಿಯ ಶಾಪದೊಳಾ |
ಸುರ ತರುಣಿ ಸುಘೋಷಿ ವ್ಯಾಘ್ರನಖಿಯಾದಳ್ ಸಂ ||
ಚರಿಸುತ ಮೃಗಗಳ ಭಕ್ಷಿಸಿ |
ಬರುತಿರೆ ರತ್ನಾಂಗನನ್ನು ಕಂಡಿಂತೆಂದಳ್ || 101 ||

**ಹಂಸಧ್ವನಿ - ಅಷ್ಟ**
ಯಾರು ಬರುತಿಹನು || ಸುಂದರನಿವ |
ನ್ಯಾರು ಬಂದವನು ||
ಮಾರನೋ ಶೂರನೋ ಸುಂದರಾಕಾರನು |
ಸಾರಿ ಈ ಎಡೆಗಾಗಿ ಓರ್ವನೆ ಬರುತಿರ್ಪ || 102 ||
ಘೋರರೂಪವನು || ಕಂಡರೆ ಭಯ |
ವೇರಿ ಓಟವಗೈವನು ||
ಬೇರೆ ನಾ ಸುಂದರಾಕಾರವ ತಾಳುತ |
ಸೇರಿ ಸುಖಿಸಿ ಸ್ವರ್ಗ | ಸೇರುವ ಪರಿಗೈವೆ || 103 ||

**ಮೋಹನ ಕಲ್ಯಾಣಿ - ಆದಿ**
ಚಂದದಿಂದ ಸುಂದರ ರೂಪದಿ | ಬಂದಳು || ಪ ||
ಮಂದಹಾಸದಿ ಮಂದಗಮನದಿ |
ಚಂದಿರಮುಖಿ ಆ | ನಂದದಿ ಕುಣಿಯುತ || 104 ||

**ಕಾಂಬೋಧಿ - ಝಂಪೆ**
ದಾರಿಕಾಣದೆ ಮುಂದೆ ಸಾಗಿ ಬರುತಿರಲಾಗ |
ನಾರಿಯಂ ಕಂಡು ಇವಳ್ಯಾರು |
ನೀರೆಯೋರ್ವಳೆ ಏತಕಿಲ್ಲಿರ್ಪಳರರೆ ಕಾಂ |
ತಾರದಲಿ ಎಂದು ನುಡಿಸಿದನು || 105 ||

**ಮಾಂಡ್ - ಏಕ**
ನೀರೆ | ನಿನ್ನಯ ಪೆಸರೇನರುಹೀ |
ದಾರಿಯಾಗಿ ಸಾರಿ || ವನದಿ |
ಓರ್ವಳೆ ಧೈರ್ಯದಿ ಸಾರುವೆಯೆಲ್ಲಿಗೆ |
ನಾರಿ ಕರುಣೆ ಬೀರಿ || 106 ||
ಮಾರಾ | ಸುಂದರ ನಿನ್ನಯ ರೂಪಿಗೆ |
ಸೂರೆಯಾದೆ ನಾನು | ಸ್ವರ್ಗದ |
ನಾರಿ ಸುಘೋಷಿಯು ಶಾಪದ ದೆಸೆಯಲಿ |
ಘೋರ ರೂಪೆಯಾನು || 107 ||
ಕೇಳಿದ | ಭಯದೊಳು ಧೈರ್ಯವ ತೋರುತ |
ನೀಳಾಲಕಿ ನೀನು || ರೂಪಸಿ |
ಪೇಳೆಲೆ ಶಾಪವು ಬಂತೆಂತೆನ್ನಲು |
ಪೇಳ್ದಳು ಕಥೆಯನ್ನು || 108 ||

**ನೃತ್ಯರೂಪಕ**

**ಕಾಂಬೋಧಿ - ಝಂಪೆ**
ಸತ್ಯಲೋಕದೊಳಜನು ಇತ್ತನೋಲಗವ ಸುರ |
ಮೊತ್ತದೊಡನಾಗ ಸಂಭ್ರಮದಿ ||
ಮತ್ತಕಾಶಿನಿ ಸುಘೋಷಿಯು ಬರಲಿ ಸಭೆಯೊಳಗೆ |
ನೃತ್ಯಗೈಯಲಿ ನಾಚದೆನಲು || 109 ||

**ಸುಘೋಷಿ ನೃತ್ಯ**

**ಮಾಂಡ್ - ಏಕ**
ತದ್ಧೀಂ ತಕದಿನ ದೀಂ|| ತದ್ಧೀಂ ತಕದಿನ ದೀಂ || ತದ್ಧೀಂ ತಕದಿನ ದೀಂ
ಆಡಿದಳ್ ನಾಟ್ಯವನು || ಸುಘೋಷಿಯು | ಆಡಿದಳ್ ನಾಟ್ಯವನು || ಪ ||
ಪಾಡುತ ಗೀತವನಭಿನಯದೋರುತ || ಆಡಿದಳ್ || ಅ. ಪ. ||
ಆಡುತ | ನೃತ್ಯದಿ ನಲಿನಲಿ | ದಾಡುತ | ಜಗದೋದ್ಧಾರನ ಕೊಂ | ಡಾಡುತ || ಪ್ರೇಕ್ಷಕರಿಗೆ ಸಂತಸ ನೀಡುತ ||
ಪಾಡುತ್ತ ಜೋಡುಗೂಡಿ ನಲಿದಾಡಿ ಪಾಡಿ ಕೊಂ | ಡಾಡಿ ಸಭೆಯು ಕರ | ತಾಡನ ಗೈಯಲು || 110 ||
ದಿದ್ದಿತ್ತಾಂ | ದಿಗ್ಡ ತಾಗ್ಡ ತರಿಕಿಟದಿನ್ನ | ದಿದ್ದಿತ್ತಾಂ | ದಿಗ್ಡ ತಾಗ್ಡ ತರಿಕಿಟದಿನ್ನ | ದಿದ್ದಿತ್ತಾಂ | ದಿದ್ದಿತ್ತಾಂ ||
ತತೋಂತ ದಿಕುತಕ ತೋಂತರಿಕಿಟತಕ ದೀಂ ತರಿಕಿಟ ತಕ ದೀಂತ ದೀಂ ತದೀಂ || ಆಡಿದಳ್ ||111 ||

**(ನೃತ್ಯದ ಕೊನೆಯಲ್ಲಿ ಬ್ರಹ್ಮನ ಮೇಲೆ ಬೀಳುವಳು)**

**ಹಂಸಧ್ವನಿ - ಝಂಪೆ**
ತೊಲಗಾಚೆ ಕಾಮಿನಿಯೆ ನಿಲಿಸು ನಾಟ್ಯವ ಸಾಕು ||
ಬೆಳೆದೆ ಸ್ವರ್ಗದಿ ಮಾನದಳತೆ ಮರೆತೆಯಲಾ ||
ಭ್ರಷ್ಟಕಾಮಿನಿ ನೀನು | ದುಷ್ಟ ದಾನವಿಯಾಗು |
ಸೃಷ್ಟಿಯೊಳಗುದಿಸೆಂದು ಕೊಟ್ಟ ಶಾಪವನು || 112 ||

**ಶಿವರಂಜಿನಿ - ರೂಪಕ**
ಅಪರಾಧವಾಯ್ತು ರಕ್ಷಿಸು ರಕ್ಷಿಸೆನ್ನೊಳು |
ಕೃಪೆದೋರು ಕಮಲಸಂಭವನೆ ||
ವಿಪರೀತ ನೃತ್ಯದಿ ಮೈಮರೆತೆನು ನಾನು |
ಸಫಲಗೊಳಿಸು ಜೀವನವನು || 113 ||

**ಕಾಪಿ - ಅಷ್ಟ**
ಕರುಣೆದೋರಿದ ಕಮಲಭವನು || ಪುಟ್ಟಿ |
ಧರೆಯೊಳ್ ಸುಂದರನೋರ್ವನನ್ನು || ನೀನು |
ವರಿಸಿ ಕಾಮವ ಪರಿಹರಿಸಿಕೊ ಸುತನಿಂದ |
ಮರಣವು ಬರೆ ಶಾಪ ಪರಿಹಾರವಪ್ಪುದು || 114 ||

(ಇಲ್ಲಿ ಸುಘೋಷಿಯು ವ್ಯಾಘ್ರನಖಿಯಾಗಿ ಕಾಣಿಸಿಕೊಳ್ಳುತ್ತಾಳೆ. ರತ್ನಾಂಗ ಹೆದರಿ ಓಡುತ್ತಾನೆ. ಆತನನ್ನು ಸುಂದರರೂಪದಿಂದ ಪುನಃ ಒಲಿಸಿಕೊಂಡು ಅವನೊಡನೆ ಕಾಡಿನಲ್ಲಿ ಬಾಳುತ್ತಾಳೆ. ಇತ್ತ ಸುಹಾಸಿನಿಯ ಮಗ ಜಯಂತ ಗುರುವಿನಿಂದ ಸಕಲವಿದ್ಯಾ ಪಾರಂಗತನಾಗಿ ಬಂದು ತಾಯಿಯ ಪಾದಕ್ಕೆ ಮಣಿದು,)

**ಮೋಹನ - ಅಷ್ಟ**
ಅಮ್ಮ ನಿನ್ನೊಡನೊಂದು ಉಮ್ಮಳವನು ಪೇಳ್ವೆ |
ಗಮ್ಮನುತ್ತರಿಸು ತಾಯೆ ||
ನಮ್ಮರಮನೆಯ ದಾಸಿಯರಿಗಿಲ್ಲದ ದೊಡ್ಡ |
ದುಮ್ಮಾನವೇಕೆಮಗೆ || 115 ||
ಅರಸನಿಲ್ಲದ ರಾಜ್ಯ ಶರಜವಿಲ್ಲದ ಕೊಳ |
ಪರತತ್ವವಿರದ ಯೋಗಿ ||
ವರಪಿತ ನಿಲ್ಲದ ಸುತ ನಾನು ಸತಿ ನೀನು |
ಅರುಹು ಉತ್ತರವ ನೀನು || 116 ||

**ಪೂರ್ವಿ - ಕಲ್ಯಾಣಿ**
ಮಗನ ಮಾತನು ಕೇಳುತ || ಸುಹಾಸಿನಿ |
ಮಿಗಿಲು ದುಃಖವ ತಾಳುತ ||
ಬಿಗಿದಪ್ಪಿ ಕಂದ ಈ ಬಗೆಯನೆಣಿಸದಿರು |
ಮಿಗೆ ಪಿತನ್ಯಾರೆಂದು | ಸುಗುಣ ಪೇಳುವೆ ಕೇಳು || 117 ||
ಜಗದೊಳು ಧರ್ಮಪುರದ || ರತ್ನಾಂಗ ರಾ |
ಜಕುಮಾರ ನಿನ್ನ ಪಿತ |
ಸೊಗದಿ ಗರ್ಭಿಣಿಯಾದ ಕಾಲದಿ ಎಮ್ಮನು |
ಅಗಲಿ ಪೋದನು ಹುಡುಕಿಸಲೆಲ್ಲು ಸಿಗಲಿಲ್ಲ || 118 ||

**ಮೋಹನ - ಏಕ**
ಕರುಣಿಸು ಹರಕೆಯ ಕರೆತರುವೆನು ಗ |
ಹ್ವರ ಗಿರಿ ಕಾನನದಿ ||
ಚರಿಸುತ ಧರೆಯೊಳಗರಿತು ಪರಾಕ್ರಮ |
ದಿರವನು ತೋರುವೆನು || 119 ||
ಸುರನರ ನಾಗರ ದುರುಳ ಕಿರಾತರ |
ಕೊರಳರಿವೆನು ತಡೆಯೆ ||
ಬರಲಸುರರ ತರಿವೆನು ಪಿತನೊಡನೈ |
ತರುವೆನು ವರುಷದಲಿ || 120 ||

**ಭಾಮಿನಿ**
ಮಾತ ಕೇಳುತಲುಬ್ಬಿ ಮನದಲಿ |
ಜಾತನನು ಮುದ್ದಿಸುತ ಗುರುತಿಗೆ |
ಆತನರಿಯುವ ತೆರದಿ ಒಪ್ಪಿಸೆ ಮುದ್ರೆಯುಂಗುರವ ||
ಮಾತೆಯಿಂದಪ್ಪಣೆಯ ಕೊಳ್ಳುತ |
ತಾತನಿಂಗರುಹುತ್ತ ಬಿಡದೆ ಮ |
ಹಾತಿಶಯ ವಿಕ್ರಮದಿ ಹೊರಟನು ಭೂತಳದಿ ತಾನು || 121 ||

**ವಚನ**
ಇತ್ತ ಕಾನನಾಂತರದೊಳ್ ಜಯಂತ ಬರುತಿರಲಾ ವ್ಯಾಘ್ರನಖಿ ತಡೆದೆಂದಳೆಂತೆನೆ ||

**ನಾಟಿ - ಅಷ್ಟ**
ಆರೆಲೋ ಹುಡುಗ || ಬಂದಿರುವವ |
ನಾರೆಲೋ ಹುಡುಗ || ಪ ||
ಘೋರ ಬಂದೀ ದಾರಿಯಲ್ಲಿ ವಿ |
ಚಾರವರಿಯದೆ ಘೋರವಿಪಿನದಿ ||
ಸೇರಿ ಎನ್ನಾಹಾರವಾದೆಯ |
ಬಾರಿ ಸಂತಸವಾಯ್ತು ಬಂದವ || ನಾರೆಲೋ || 122 ||

**ಮೋಹನ - ಮಟ್ಟೆ**
ದುಷ್ಟ ದನುಜೆ ಕಾಡ ಮೃಗವ |
ಮುಟ್ಟಿ ಕೊಲುವ ತೆರನಿದಲ್ಲ |
ಕುಟ್ಟಿ ಯಮನ ಬಳಿಗೆ ನಿನ್ನ | ನಟ್ಟುವೆನು ಕಣಾ || 123 ||
ಅರರೆ ಹುಡುಗ ಎನ್ನ ಕೆಣಕಿ |
ಧರೆಯೊಳುಳಿವ ಮನುಜರಿಹರೆ |
ಧುರಕೆ ನಿಲ್ಲು ಪರಿಕಿಸೆನ್ನ | ಪರಮ ಶಕ್ತಿಯ ||124 ||

**ವಚನ**
ರಾಕ್ಷಸಿ ಸತ್ತು ತನ್ನ “ಶಾಪ ವಿಮೋಚನೆಯಾಯ್ತು” ಎಂದು ಕೂಗುತ್ತಾ ಸ್ವರ್ಗಕ್ಕೆ ತೆರಳಲು, ರತ್ನಾಂಗ ಯುದ್ಧಕ್ಕಿದಿರಾದನೆಂತೆನೆ,

**ಮೋಹನ - ಅಷ್ಟ**
ಆರೆಲೋ ಹುಡುಗ ನೀನು || ಸ್ತ್ರೀ ಹಂತಕ |
ಬಾರೆನ್ನೊಳ್ ಸೆಣಸು ಇನ್ನು ||
ಘೋರ ತಪ್ಪಿಗೆ ಶಿಕ್ಷೆ ನೀಡುವೆ ಹಿಡಿದ ಈ |
ಕೂರಸಿಯಿಂದೆನಲು || 125 ||
ಸಾಕು ಸಾಕೆಲೊ ಗರ್ವದಿ | ಎನ್ನೊಡನೆ ನೀ |
ನೇಕೆ ನುಡಿವೆ ಶೌರ್ಯದಿ ||
ಕಾಕುತನದಿ ಧೂರ್ತಳಡ್ಡಗಟ್ಟಲು ಕೊಂದೆ |
ಜೋಕೆ ನೀ ನಡೆ ಸುಮ್ಮನೆ || 126 ||

**ವಾರ್ಧಕ**
ಹಾ ಸುಹಾಸಿನಿ ಎಂದು ಎದೆಗೆ ನಾಟಿದ ಶರಕೆ |
ಘಾಸಿಗೊಳ್ಳುತ ಕೂಗಿ ಮರಣಮುಖನಾಗುತಿರೆ |
“ಹಾ ಸುಹಾಸಿನಿ” ಎಂಬ ನುಡಿಗೆ ಮಿಗಿಲಾಶ್ಚರ್ಯತಳೆದಾ ಜಯಂತನಂದು || 127 ||

**ಸಾವೇರಿ - ಝಂಪೆ**
ಹತ್ತಿರಕೈತಂದು ಯಾರು ನೀ ಅರುಹೆನ್ನ |
ಹೆತ್ತವ್ವೆಯಳ ಪೆಸರ ನೀನು ||
ಎತ್ತಿ ನುಡಿದೆಯದೇಕೆ ಪೇಳೆಂದು ಕೇಳುತಿರೆ |
ರತ್ನಾಂಗ ಕಣ್ದೆರೆದು ನೋಡಿ || 128 ||
ಹುಡುಗ ಕೇಳೆನ್ನ ಕೈ | ಹಿಡಿದ ಸತಿ ಗಾಂಧಾರ |
ಪೊಡವಿ ಪಾಲಕನ ಸುತೆಯವಳು ||
ಕಡು ದುಃಖಿಕೆರವಾದಳೆನ್ನಿಂದಲೇ ನಿನ್ನು |
ನುಡಿದು ಫಲವೆನಲೆಂದನವನು || 129 ||

**ಸೌರಾಷ್ಟ್ರ – ತ್ರಿವುಡೆ**
ಕೇಳುತಲಿ ಹಾ ಪಿತನೆ ನಿಮ್ಮಯ |
ಖೂಳಸುತ ನಾನಾಗಿರುವೆ ತವ |
ಬಾಳ ಮುಗಿಸಿದೆ ನಕಟಕಟ ಹಾ | ವಿಧಿಯೆ ಎನಲು || 130 ||

**ಶಿವರಂಜಿನಿ - ಝಂಪೆ**
ಭರದೊಳಪ್ಪುತ | ತರಳ ನಿಜಪಿತ ||
ದುರುಳನಾಗಿಹೆ | ತೊರೆಯೋ ಚಿಂತೆಯ || 131 ||
ಪುರಕೆ ಪೋಗಯ್ಯ | ಅರುಹು ಜನನಿಗೆ ||
ತೊರೆದ ತಪ್ಪಿಗೆ | ಕ್ಷಮಿಸೆ ಹೇಳಯ್ಯ || 132 ||
ನಿನ್ನ ಜನನಿಯ | ರಾಜ್ಯವನು ಸಹಾ ||
ಚೆನ್ನಾಗಿ ನೋಡು | ಸೌಖ್ಯದಿ ಬಾಳು || 133 ||

**ಭಾಮಿನಿ**
ಜನಕನಳಿದುದ ಕಂಡು ನಾನೇ |
ಹನನಗೈದಂತಾಯ್ತು ಪಾಪದ |
ತನುವ ತೊರೆಯುವೆನೆನುತ ಕರವಾಲವನು ನೆಗಹಲ್ಕೆ ||
ಅನಿತರಲಿ ಬಂದಾಗ ತಡೆಯುತ |
ಮುನಿಪತಿ ಭರದ್ವಾಜ ಪೇಳಿದ |
ತನುವ ತ್ಯಜಿಸುವ ಯತ್ನ ಬಿಡು ನಾ ಪೇಳ್ವೆ ಶುಭವಹುದು || 134 ||

**ಮೋಹನ - ರೂಪಕ**
ಅರಿತೆನೀ ಕೃತ್ಯಕ್ಕೆ ತರವಲ್ಲ ಮರಣ ನಾ |
ಪರಿಹರಿಸುವೆ ಬಂದ ಕಷ್ಟ ||
ದೊರೆ ಧರ್ಮಪ್ರಭು ಎನ್ನ ಗೋತ್ರಜ ಇಲ್ಲಿಯೆ |
ಮೆರೆವುದು ಸಂಜೀವನಾದ್ರಿ || 135 ||
ಮೃತ ಸಂಜೀವಿನಿ ಗಿಡ ಮೂಲಿಕೆಯಿಹುದಲ್ಲಿ |
ಸತತ ಕಾವಲು ಶೇಷನಾಜ್ಞೆ ||
ಅತಿಭಯಂಕರ ನಾಗ ಕುಲವ ಗೆಲ್ವುದಕೀವೆ |
ಅತುಲ ಮಂತ್ರಾಸ್ತ್ರ ಶಸ್ತ್ರಗಳ || 136 ||

**ಮೋಹನ - ಝಂಪೆ**
ಮುನಿಪತಿಯ ಬೀಳ್ಕೊಂಡು ಘನತರೋತ್ಸಹದಿ ಜೀ |
ವನಗಿರಿಗೆ ಪೊರಟನಾಕ್ಷಣದಿ ||
ಜನಕನುಳಿವನು ಎಂದು ಮನದೊಳುಬ್ಬುತ ಬಂದು |
ಫಣಿಕುಲವ ಕೆಣಕಲನುವಾಗೆ || 137 ||
ಸಂಜೀವನಾದ್ರಿಯನು ಸುತ್ತುವರಿದಿಹ ಉರಗ |
ಭಂಜನಕೆ ಧನುವ ಜೇವೊಡೆಯೆ |
ನಂಜುಗುಳಿ ಕೇದಾರ ತಾಮ್ರಪರ್ಣಿಗಳು ತಡೆ |
ದಂಜಿಸುತಲವನ ಕೆಣಕಿದರು || 138 ||
ಆರೆಲವೋ ಹುಡುಗ ನೀ ಚೋರತನದಲಿ ಗಿರಿಯ |
ಸೇರಿ ಮೂಲಿಕೆಯನಪಹರಿಸೆ ||
ಸಾರಿ ಬಂದುದಕೀಗ ಘೋರ ಶಿಕ್ಷೆಯ ನೀವೆ |
ತೋರು ವಿಕ್ರಮವನೀಕ್ಷಣದಿ || 139 ||
ಎನ್ನ ಚೋರತ್ವವೆಂತಿನ್ನು ಘಟಿಸಿತು ಇಲ್ಲಿ |
ನಿನ್ನ ಜಯಿಸಿಯೆ ಪಡೆವೆನದನು |
ಘನ್ನ ಮುನಿಗಳ ಹರಕೆಯನ್ನು ಪಡೆದಿಹೆ ಬರಿದೆ |
ಎನ್ನ ಕೆಣಕುವೆ ವ್ಯರ್ಥವೆಂದ ||140 ||

**ಮೋಹನ - ಮಟ್ಟೆ**
ಮೃತ್ಯು ಸಿದ್ಧ ಮನುಜರಿಂಗೆ |
ವ್ಯರ್ಥ ನಮ್ಮ ಕೆಣಕಿ ನೀನು |
ಮೃತ್ಯು ಮುಖವ ಗೆಲುವ ಇಂಥ | ವೃತ್ತಿ ಸಲ್ಲದು || 141 ||
ಯುಕ್ತಿಯಿಂದ ನಮ್ಮಯ ಸಾ |
ಮರ್ಥ್ಯ ತೋರಿ ಗೆಲಲು ಬಂದೆ |
ವ್ಯರ್ಥವಾಗದೆಲವೊ ನಾಗ | ಶಕ್ತಿಯ ತೋರು || 142 ||

**ವಾರ್ಧಕ (ಅರ್ಧ)**
ನೊಂದು ಕೇದಾರ ಮತ್ತಾ ತಾಮ್ರಪರ್ಣಿಗಳು |
ಬಂದು ದೊರೆಯಾದ ಗುಣಮಣಿಯ ಕಾಣುತ ನರರು |
ಬಂದು ಕೆಣಕುತಲಿಹರು ಸಂಜೀವಿನಿಯ ನೊಯ್ಯಲೆಂದು ಬಂದಿಹರೆನ್ನಲು || 143 ||

**ಸಾರಂಗ - ಅಷ್ಟ**
ಹುಡುಗನೋರ್ವನು ಗರ್ವದಿ || ಬಂದೆಮ್ಮನು |
ಹೊಡೆದು ಅಟ್ಟಿದ ಯುದ್ಧದಿ ||
ಕಡು ಪರಾಕ್ರಮಿ ಗಿರಿಯಡರಿ ಒಯ್ದನು ಜೀವ |
ಗಿಡವ ತಡೆಯಲೆಮ್ಮ | ಕಡೆಗಣಿಸಿದನೆನೆ || 144 ||
ಕೇಳುತಾಕ್ಷಣ ಗುಣಮಣಿ || ಆಶ್ಚರ್ಯವ |
ತಾಳುತ ವೀರಾಗ್ರಣಿ ||
ಕೀಳು ಮನುಜ ನಿಮ್ಮ ಗೋಳುಗುಟ್ಟಿಸಿದನೆ |
ಕಾಲಕೆಟ್ಟಿತು ಇನ್ನು ಪೇಳಲೇನೆನ್ನುತ || 145 ||
ಎನುತ ಕೋಪವ ಗೊಂಡನು || ಸೇನೆಯ ಕೂಡಿ |
ಗುಣಮಣಿ ನಡೆತಂದನು ||
ರಣದಿ ಬಾಲಕನ ಶೈಮಿನಿಗೆ ಅಟ್ಟುವೆನೆಂದು |
ಮನದಿ ನಿರ್ಧರಿಸುತಾಕ್ಷಣದಿ ತಾನೈತಂದ || 146 ||

**ಸೌರಾಷ್ಟ್ರ - ತ್ರಿವುಡೆ**
ನೋಡಿದನು ಬಾಲಕನ ತಲೆದೂ |
ಗಾಡಿ ಧೈರ್ಯಕೆ ಜೀವನದ ಗಿಡ |
ಮೋಡಿ ಮಾಡಿತು ಮೃತ್ಯು ಕಾರಣ | ವಾಯ್ತು ನಿಜವು || 147 ||

**ಮೋಹನ - ಅಷ್ಟ**
ಯಾರು ನೀನೆಲೆ ಬಾಲ ಈ ರೀತಿಯಿಂದ ನೀ |
ಕೋರಿ ಸಂಜೀವಿನಿಯ ||
ಘೋರ ಕಷ್ಟಕೆ ಗುರಿಯಾಗುವೆಯೇಕೆ ವಿ |
ಚಾರವ ಪೇಳೆಂದನು || 148 ||
ಧರ್ಮಪುರದ ರಾಜ ನಣುಗನೆನ್ನಯ ಪಿತ |
ಅಮ್ಮ ಗಾಂಧಾರ ಜಾತೆ ||
ಕರ್ಮವಶದಿ ಪಿತನಪಮೃತ್ಯುಗೊಳಗಾಗೆ |
ನಿಮ್ಮ ಬಳಿಗೆ ಬಂದೆನು || 149 ||
ಮರಣಹೊಂದಿದ ಮೇಲೆ ನರರಿಗೆ ಸಿಗದಯ್ಯ |
ವರ ಸಂಜೀವಿನಿಯಿದನು |
ಬರಿದೆ ಬಯಸಿ ನೀನು ಮುಂದಡಿಯಿಟ್ಟರೆ |
ತರಳ ನಿನ್ನನು ಕೊಲ್ವೆನು || 150 ||
ಗಣ್ಯವೆ ನೀನೆನಗಿನ್ನು ಯುದ್ಧದಿ ಜಯ |
ವನ್ನು ಪಡೆದು ಗಿಡವ ||
ಎನ್ನ ತಂದೆಯ ಬಳಿಗಿನ್ನೊಯ್ವೆ ನಿಶ್ಚಯ |
ವೆನ್ನುತೆಸೆದ ಶರವ || 151||

**ಭಾಮಿನಿ**
ಶರಹತಿಗೆ ಕಡುನೊಂದು ಗುಣಮಣಿ |
ತರಳ ತಡೆತಡೆಯಿಂಥ ವಿಕ್ರಮ |
ದಿರವು ಕಾರಣವೇನು ಯಾರಟ್ಟಿದರು ಪೇಳೆನಲು ||
ವರಮುನಿ ಭರದ್ವಾಜ ವನದಲಿ |
ಹರಸಿ ಕಳುಹಿದನೆನ್ನ ತ್ವರಿತದಿ |
ಕರುಣಿಸದೆ ಎಂತುಳಿವೆ ಮಂತ್ರಾಸ್ತ್ರವಿದು ಪುಸಿಯಹುದೆ || 152 ||

**ರೇಗುಪ್ತಿ - ರೂಪಕ**
ಖತಿಗೊಳದಿರು ಶರಹತಿಯ ಸೈರಿಸಲಾರೆ |
ಮತಿವಂತ ಬಾಲಕ ನಿನಗೆ ||
ಜತನದಿಂದೀವೆ ಮೂಲಿಕೆಯನೀಗಲೆ ಕೊಂಡು |
ಅತಿವೇಗದಿಂದ ಪೋಗಯ್ಯ || 153 ||

ಮೃತ ಸಂಜೀವಿನಿಯನ್ನು ಜತನದಿ ಒಯ್ದು ಮುನಿ |
ಪತಿಗೆರಗಿದ ಶ್ರದ್ಧೆಯಿಂದ ||
ಮತಿವಂತೆ ಮಾತೆಯ ಮನದಿ ಧ್ಯಾನಿಸುತಲಿ |
ಪಿತನ ದೇಹಕೆ ಸ್ಪರ್ಶಗೈದ || 154 ||
ಚಲಿಸಿತು ಪ್ರಾಣವಾಯುವು ದೇಹದೊಳಗೆ ಸಂ |
ಚಲಿಸಿತು ಜೀವ ರತ್ನಾಂಗ ||
ನಲವಿಂದ ನಿದ್ರೆಯ ತಿಳಿದಂತೆ ಎದ್ದಾಗ |
ಒಲಿದಪ್ಪಿಕೊಂಡ ಬಾಲಕನ || 155 ||
ಮುನಿಪತಿಗೆರಗಿ ನಿಮ್ಮಯ ಕರುಣದಿ ಪೊಸ |
ಜನುಮವಿಂದಾಯ್ತೆನಗೆನಲು ||
ಘನ ಕರುಣಾಂಬುಧಿ ಕರಪಿಡಿದೆತ್ತುತಾ |
ತನನಾಲಂಗಿಸುತಲಿಂತೆಂದ || 156 ||
ದೊರೆ ಧರ್ಮಪ್ರಭುಯೆನ್ನ ಗೋತ್ರಜ ನೀನೀಗ |
ಹೊರತಲ್ಲ ಸತ್ಯಧರ್ಮದಲಿ ||
ಪರರ ನೋಯಿಸದಿನ್ನು ಸತಿಸುತರೊಡಗೂಡಿ |
ಪುರಕೈದಿ ಪಿತಗೆ ಶರಣಾಗು || 157 ||

**ಸೌರಾಷ್ಟ್ರ – ತ್ರಿವುಡೆ**
ನಡನಡುಗಿ ರತ್ನಾಂಗ ತನ್ನನು |
ಪಡೆದ ತಂದೆಗೆ ದ್ರೋಹವೆಸಗಿದೆ |
ಮಡದಿ ಮಕ್ಕಳ ಕಷ್ಟಕಾರಣ | ನಾದೆನೆನಲು || 158 ||
ಇದುವೆ ಪೂರ್ವದ ಕರ್ಮ ತಿಳಿದಿರು |
ಮುದದಿ ಮಾತಾಪಿತರ ಪಾವನ |
ಪದಕೆರಗಿ ಕ್ಷಮೆ ಕೇಳಿ ರಾಜ್ಯವ | ನಾಳು ಎನಲು || 159 ||

**ಮಧುಮಾಧವಿ - ತ್ರಿವುಡೆ**
ಎಂದು ಹರಸುತ ಬೀಳ್ಕೊಡಲು ನೃಪ |
ನಂದನನು ನಂದನನ ಸಹಿತಾ |
ನಂದದಲಿ ಗಾಂಧಾರಪುರಕೈತಂದು ವಿವರವ ಪೇಳಲು | ಮನ್ನಿಸುತ್ತ || 160 ||
ಚರಣಯುಗಳಕೆ ನಮಿಸಿದಾಕೆಯ |
ಕರಪಿಡಿದು ತಾನೆತ್ತಿಯಪ್ಪುತ |
ಇರದು ಕ್ಷಮೆ ನಾ ಗೈದ ದ್ರೋಹಕೆ ತರಳನಿಂ ಮರು ಜನ್ಮವು | ದೊರಕಿತೆನಗೆ || 161 ||

**ವಾರ್ಧಕ**
ಪಿತ ತನ್ನ ಮಗನ ಉನ್ನತಿಕೆಯಂ ಬಯಸಿದುದ |
ನತಿಗಳೆದು ದ್ರೋಹ ಗೈದುದಕೆ ಗತಿಯಾಯ್ತೆಂದು |
ಸತಿಸುತರನೊಡಗೂಡಿ ಧರ್ಮಪುರಕೈತಂದು ಇರಲು ಮಂಗಳವಾದುದು ||
ಕ್ಷಿತಿಯೊಳಗೆ ಕ್ಷೀರಪುರ ಸನಿಹ ಮಾರ್ವಿಯ ಭಾಗ |
ವತ ಶ್ರೀನಿವಾಸ ಸುತ ನಾರಣಪ್ಪನು ತನ್ನ |
ಸುತ ಶ್ರೀಧರನ ಸಲಹೆಯಿಂ ಬರೆದ ಕೃತಿಯಿದಂ ಮೆರೆಸುವುದು ಶ್ರೋತೃ ಜನರು || 162 ||

**ಧವಳಾರ - ಏಕ**
ಚೇರ್ಕಿಯೊಳ್ ನೆಲೆಸಿದ ಗಣನಾಥಗೆ | ಮು |
ದೂರಿಯೊಳ್ ಮೆರೆದಿಹ ಮಹಲಿಂಗಗೆ |
ಧಾತ್ರಿಯೊಳಮೃತೇಶ್ವರಿ ದುರ್ಗಾಂಬೆಗೆ |
ಹಿರೆ ಮಾಲಿಂಗಗೆ ಗಣಪತಿಗೆ ||
ಮಂಗಳಂ ಜಯ ಶುಭ ಮಂಗಳಂ || ಮಂಗಳಂ ಜಯ ಶುಭ ಮಂಗಳಂ ||163 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಪದವೀಧರ ಯಕ್ಷಗಾನ ಸಂಘ, ಮುಂಬೈ

**ಪ್ರಸಂಗ ಪ್ರತಿ ಆಧಾರ:** ಪ್ರಸಂಗಕರ್ತರ ಮೂಲಪ್ರತಿ

**ಪ್ರಸಂಗ ಪ್ರತಿ ಕೊಟ್ಟವರು:** ದಿನೇಶ ಉಪ್ಪೂರ ಎಮ್. ಎನ್.

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ದಿನೇಶ ಉಪ್ಪೂರ ಎಮ್. ಎನ್.

**ಅಂತರಜಾಲ ಪ್ರತಿ ಬರವಣಿಗೆ:** ದಿನೇಶ ಉಪ್ಪೂರ ಎಮ್. ಎನ್.

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ ಎಮ್. ಎನ್.

**ಅಂತರಜಾಲ ಪ್ರತಿ ಉತ್ಪಾದನೆ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಪ್ರಕಾಶನ:** ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ